ಕರ್ನಾಟಕ ಸರ್ಕಾರ
(ಕಂದಾಯ ಇಲಾಖೆ)

ಉಪತಹಶೀಲ್ದಾರರ ಕಾರ್ಯಾಲಯ, ಮರಿಯಮ್ಮನಹಳ್ಳಿ ರವರ ನ್ಯಾಯಾಲಯದಲ್ಲಿ

| ವಾದಿ | ಪ್ರತಿವಾದಿ |
|---|---|
| ಶ್ರೀ ಎನ್.ಹನುಮಂತಪ್ಪ | ಶ್ರೀ ಎನ್.ಬಸಪ್ಪ |
| ತಂದೆ ಲೇಟ್ ಭೀಮಪ್ಪ. | ತಂದೆ ಲೇಟ್ ಭೀಮಪ್ಪ. |
| ಚಿಲಕನಹಟ್ಟಿ ಗ್ರಾಮ, ಹೊಸಪೇಟೆ ತಾಲೂಕು | ಚಿಲಕನಹಟ್ಟಿ ಗ್ರಾಮ, ಹೊಸಪೇಟೆ ತಾಲೂಕು |

*******

ಪೀಠಿಕೆ:-

ವಾದಿಯಾದ ಶ್ರೀ ಎನ್.ಹನುಮಂತಪ್ಪ ತಂದೆ ಲೇಟ್ ಎನ್.ಭೀಮಪ್ಪ ಇವರು ಹೊಸಪೇಟೆ ತಾಲೂಕು ಮರಿಯಮ್ಮನಹಳ್ಳಿ ಹೋಬಳಿಯ ಹಾರವನಹಳ್ಳಿ ಗ್ರಾಮದ ಸ.ನಂ. 145/ಎ ವಿಸ್ತೀರ್ಣ 2.63, ಸ.ನಂ. 126 ವಿಸ್ತೀರ್ಣ 1.21 ಎಕರೆ ಜಮೀನುಗಳು ವಾದಿಯ ತಾಯಿಯಾದ ಶ್ರೀಮತಿ ಕಾಳಮ್ಮ ಗಂಡ ಭೀಮಪ್ಪ ಇವರ ಹೆಸರಿನಲ್ಲಿದ್ದು, ಸದರಿಯವರು ಮರಣ ಹೊಂದಿರುವುದರಿಂದ ವ್ಯಾಜ್ಯದ ಜಮೀನುಗಳನ್ನು ಪಟ್ಟಾದಾರನೊಂದಿಗೆ ಜಂಟಿಯಾಗಿ ವರ್ಗಾಯಿಸಲು ಕೋರಿ ಅರ್ಜಿ ಸಲ್ಲಿಸಿರುವ ಮೇರೆಗೆ, ನಮೂನೆ-21 ನ್ನು ಗ್ರಾಮಲೆಕ್ಕಿಗರು, ಹಾರವನಹಳ್ಳಿ ಇವರಿಗೆ ಜಾರಿ ಮಾಡಲು ನೀಡಿದ್ದು, ಸಬಂಧಪಟ್ಟರಿಗೆ ಜಾರಿ ಮಾಡಿ, ಗ್ರಾಮದಲ್ಲಿ ಪ್ರಚುರಪಡಿಸಿರುತ್ತಾರೆ. ನಿಗಧಿತ ಅವಧಿಯೊಳಗೆ ಶ್ರೀ ಎನ್.ಬಸಪ್ಪ ತಂದೆ ಲೇಟ್ ಭೀಮಪ್ಪ ಇವರು ದಿನಾಂಕ 05-05-2014 ರಂದು ತಕರಾರು ಅರ್ಜಿ ಸಲ್ಲಿಸಿದ್ದು, ಕಂದಾಯ ನಿರೀಕ್ಷಕರು ಸದರಿ ಪ್ರಕರಣವನ್ನು ವಿವಾದಸ್ಪದ ಪ್ರಕರಣವೆಂದು ಈ ಕಾರ್ಯಾಲಯಕ್ಕೆ ಸಲ್ಲಿಸಿರುತ್ತಾರೆ.

ಸದರಿ ಪ್ರಕರಣದಲ್ಲಿ ನೈಸರ್ಗಿಕ ನ್ಯಾಯದ ಹಿತ ದೃಷ್ಟಿಯಿಂದ ಎರಡು ಪಕ್ಷದವರಿಗೆ ಅವಕಾಶ ನೀಡಿ, ಪ್ರಕರಣದ ವಿಚಾರಣೆಯನ್ನು ದಿನಾಂಕ 30.06.2014 ರಂದು ಪ್ರಾರಂಭಿಸಿ ದಿನಾಂಕ 14.03.2016 ರಂದು ಮುಕ್ತಾಯಗೊಳಿಸಲಾಯಿತು.

ವಾದಿಯು ವಿಚಾರಣೆಗೆ ಹಾಜರಾಗಿ, ವಿವಾದಾಸ್ಪದ ಜಮೀನುಗಳು ತಾಯಿಯಾದ ಶ್ರೀಮತಿ ಕಾಳಮ್ಮ ರವರ ಹೆಸರಿನಲ್ಲಿದ್ದು ಸದರಿಯವರು ಮೃತಪಟ್ಟಿರುವುದರಿಂದ ಪೋತಿವಾರಸು ಪ್ರಕಾರ ಮಗನಾದ ನನಗೆ ಹಕ್ಕು ಬದಲಾವಣೆ ಮಾಡಿಕೊಡಬೇಕೆಂದು ಕೋರಿರುತ್ತಾರೆ.

ಪ್ರತಿವಾದಿಯು ವಿಚಾರಣೆಗೆ ಹಾಜರಾಗಿ, ವಿವಾದಾಸ್ಪದ ಜಮೀನುಗಳು ತಾಯಿಯಾದ ಶ್ರೀಮತಿ ಕಾಳಮ್ಮ ರವರ ಹೆಸರಿನಲ್ಲಿದ್ದು, ಸದರಿಯವರಿಗೆ ನಾನು ಸಹ ಮಗನಾಗಬೇಕಾಗಿದ್ದು, ಈ ವಿವಾದಾಸ್ಪದ ಜಮೀನಿನಲ್ಲಿ ಹಕ್ಕು/ಪಾಲು ಇರುವುದಾಗಿ ವಾರವನ್ನು ಮಂಡಿಸಿರುತ್ತಾರೆ.

ವಿವಾದಸ್ಪದಾ ಜಮೀನಿಗೆ ಸಂಬಂಧಿಸಿದ ದಾಖಲೆಗಳನ್ನು ಪರಿಶೀಲಿಸಲಾಗಿ ಮತ್ತು ವಿಚಾರಣಾ ಸಮಯದಲ್ಲಿ ವಾದಿ ಮತ್ತು ಪ್ರತಿವಾದಿಗಳು ನೀಡಿದ ಹೇಳಿಕೆಯ ಪ್ರಕಾರ ಈ ಕೆಳಕಂಡ ಅಂಶಗಳು ಕಂಡು ಬಂದಿರುತ್ತವೆ.

1. ವಿವಾದಸ್ಪದ ಜಮೀನುಗಳ ಪಹಣಿ ಪತ್ರಿಕೆಗಳಲ್ಲಿ ಶ್ರೀ ಎನ್.ಸತ್ಯಪ್ಪ ತಂದೆ ಹಿರಿದಾಳಪ್ಪ ಮತ್ತು ಶ್ರೀಮತಿ ಎನ್.ಕಾಳಮ್ಮ ಗಂಡ ಭೀಮಪ್ಪ ಇವರುಗಳ ಹೆಸರು ಜಂಟಿಯಾಗಿ ನಮೂದಿರುವುದು ಕಂಡುಬರುತ್ತದೆ.
2. ಜಂಟಿದಾರರಾದ ಶ್ರೀ ಎನ್. ಸತ್ಯಪ್ಪನವರು ದಿನಾಂಕ 14.12.2008 ರಂದು [illegible]ವುದರಿಂದ ಅವರ ವಾರಸುದಾರರು ಸಹ ವಿಚಾರಣೆಗೆ ಹಾಜರಾಗಿ ವಿವಾದಾಸ್ಪದ [illegible] ಜಂಟಿ ಪಟ್ಟಾದಾರರ ಎಲ್ಲಾ ವಾರಸುದಾರರು ಒಟ್ಟಾಗಿ ಚರ್ಚಿಸಿ ರಾಜಿ ಪಂಚಾಯತಿ ಮಾಡಿಕೊಂಡಿದ್ದು, ಒಪ್ಪಿಗೆ ಕರಾರು ಪತ್ರ ಮಾಡಿಕೊಂಡಿರುವುದಾಗಿ, ಅಂದರೆ ಹಕ್ಕು ಬದಲಾವಣೆ ಮಾಡಲು ನಮ್ಮೆಲ್ಲಾರ ಸಮ್ಮತಿ ಇರುವುದಾಗಿ ಹೇಳಿಕೆಯನ್ನು ನೀಡಿರುತ್ತಾರೆ.

ತಾಲೂಕಾ ಕಛೇರಿ, ಹೊಸಪೇಟೆ
TALUKA OFFICE, HOSPET
17 MAY
ಕಡತ ಸಂಖ್ಯೆ:
ದಿನಾಂಕ:

2ನೇ ಪುಟಕ್ಕೆ. . . .

3. ಹೊಸಪೇಟೆ ತಾಲೂಕು ಹಾರವನಹಳ್ಳಿ ಗ್ರಾಮದ ಸರ್ವೆ ನಂಬರ್ 126 ರಲ್ಲಿ ವಿಸ್ತೀರ್ಣ 1.21 ಎಕರೆ ಜಮೀನಿನಲ್ಲಿ ಶ್ರೀಎನ್.ಸತ್ಯಪ್ಪ ತಂದೆ ಹಿರಿದಾಳಪ್ಪ ರವರ ವಾರಸುದಾರರಿಗೆ ಯಾವುದೇ ಭಾಗ ಇರುವುದಿಲವೆಂದು ಮತ್ತು ಶ್ರೀಮತಿ ಎನ್. ಕಾಳಮ್ಮ ಗಂಡ ಭೀಮಪ್ಪ ರವರ ವಾರಸುದಾರರಾದ ಶ್ರೀ ಎನ್.ಹನುಮಂತಪ್ಪ ತಂದೆ ಭೀಮಪ್ಪ ಇವರಿಗೆ ಸ.ನಂ. 126 ರಲ್ಲಿ ಒಟ್ಟು ವಿಸ್ತೀರ್ಣ 1.21 ರಲ್ಲಿ 0.90 ಎಕರೆ ಮತ್ತು ಶ್ರೀ ಎನ್.ಬಸಪ್ಪ ತಂದೆ ಭೀಮಪ್ಪ ರವರಿಗೆ 0.31 ಎಕರೆ ಮತ್ತು ಸ.ನಂ.145/ಎ ವಿಸ್ತೀರ್ಣ 2.63 ಎಕರೆಯಲ್ಲಿ ವಿಸ್ತೀರ್ಣ 1.31 ಎಕರೆ ಜಮೀನು ಶ್ರೀ ಎನ್.ಸತ್ಯಪ್ಪ ತಂದೆ ಹಿರಿದಾಳಪ್ಪನ ವಾರಸುದಾರರಾದ ಮತ್ತು ಖಾಸಾ ಹೆಂಡತಿಯಾ ಶ್ರೀಮತಿ ಎನ್.ಹನುಮವ್ವ ಗಂಡ ದಿವಂಗತ ಎನ್.ಸತ್ಯಪ್ಪ ರವರಿಗೆ ಮತ್ತು ಉಳಿದ ವಿಸ್ತೀರ್ಣ 1.32 ಎಕರೆ ಜಮೀನು ಶ್ರೀ ಎನ್.ಹನುಮಂತಪ್ಪ ತಂದೆ ಎನ್.ಭೀಮಪ್ಪ ರವರಿಗೆ ಸೇರತಕ್ಕದೆಂದು ಮನ: ಪೂರ್ವಕವಾಗಿ ಒಪ್ಪಿರುವುದಾಗಿ ಒಪ್ಪಿಗೆ ಪ್ರಮಾಣ ಪತ್ರವನ್ನು ಸಲ್ಲಿಸಿರುತ್ತಾರೆ.
4. ಶ್ರೀ ಎನ್.ಸತ್ಯಪ್ಪ ತಂದೆ ಹಿರಿದಾಳಪ್ಪ, ಶ್ರೀ ನಂದಿಹಳ್ಳಿ ಭೀಮಪ್ಪ ತಂದೆ ಹನುಮಂತಪ್ಪ ಹಾಗೂ ಶ್ರೀಮತಿ ಕಾಳಮ್ಮ ಗಂಡ ಭೀಮಪ್ಪ ಇವರುಗಳು ಮರಣ ಹೊಂದಿದ್ದು ಮರಣ ಪ್ರಮಾಣ ಪತ್ರದಿಂದ ಕಂಡುಬರುತ್ತದೆ.

ವಾದಿ ಮತ್ತು ಪ್ರತಿವಾದಿಗಳ ವಾದವನ್ನು ಆಲಿಸಿ ಈ ಕೆಳಕಂಡಂತೆ

**ಆದೇಶ**

ಸಂ/ಕಂ/ನಾಕಮ/ತಕರಾರು/**05**/2014-15 ದಿನಾಂಕ : 16.05.2016

ಪೀಠಿಕೆಯಲ್ಲಿ ವಿವರಿಸಿದ ಹಿನ್ನೆಲೆ, ಸಂದರ್ಭ ವಾಸ್ತವಾಂಶ, ದಾಖಲಾತಿಗಳ ಆಧಾರದ ಮೇಲೆ. ಹೊಸಪೇಟೆ ತಾಲೂಕು ಹಾರವನಹಳ್ಳಿ ಗ್ರಾಮದ ಸರ್ವೆ ನಂ. 126 ರಲ್ಲಿ ವಿಸ್ತೀರ್ಣ 1.21 ರಲ್ಲಿ 0.90 ಎಕರೆ ಶ್ರೀ ಎನ್.ಹನುಮಂತಪ್ಪ ತಂದೆ ಭೀಮಪ್ಪ ಇವರಿಗೆ ಮತ್ತು ಶ್ರೀ ಎನ್.ಬಸಪ್ಪ ತಂದೆ ಭೀಮಪ್ಪ ರವರಿಗೆ ವಿಸ್ತೀರ್ಣ 0.31 ಎಕರೆ ಮತ್ತು ಸ.ನಂ. 145/ಎ ವಿಸ್ತೀರ್ಣ 2.63 ಎಕರೆಯಲ್ಲಿ ವಿಸ್ತೀರ್ಣ 1.31 ಎಕರೆ ಜಮೀನು ಶ್ರೀ ಎನ್.ಸತ್ಯಪ್ಪ ತಂದೆ ಹಿರಿದಾಳಪ್ಪನ ವಾರಸುದಾರರಾದ ಮತ್ತು ಖಾಸಾ ಹೆಂಡತಿಯಾದ ಶ್ರೀಮತಿ ಎನ್.ಹನುಮವ್ವ ಗಂಡ ದಿವಂಗತ ಎನ್. ಸತ್ಯಪ್ಪ ರವರಿಗೆ ಮತ್ತು ಉಳಿದ ವಿಸ್ತೀರ್ಣ 1.32 ಎಕರೆ ಜಮೀನು ಶ್ರೀ ಎನ್.ಹನುಮಂತಪ್ಪ ತಂದೆ ಎನ್.ಭೀಮಪ್ಪ ರವರ ಹೆಸರಿಗೆ ಹಕ್ಕುಬದಲಾವಣೆ ಮಾಡಲು ಕಂದಾಯ ನಿರೀಕ್ಷಕರಿಗೆ ಆದೇಶಿಸಲಾಗಿದೆ.

ಈ ಆದೇಶವನ್ನು ಹೇಳಿ ಬರೆಯಿಸಿ, ಗಣಕೀರಣ ಮಾಡಿಸಿ, ತಪ್ಪುಗಳನ್ನು ಸರಿಪಡಿಸಿ ಈ ದಿನ ದಿನಾಂಕ 16.05.2016 ರಂದು ತೆರೆದ ನ್ಯಾಯಾಲಯದಲ್ಲಿ ಘೋಷಿಸಿದೆ.

ಉಪ ತಹಶೀಲ್ದಾರರು,
ನಾಡಕಛೇರಿ, ಮರಿಯಮ್ಮನಹಳ್ಳಿ

ಗೆ,
ವಾದಿ ಮತ್ತು ಪ್ರತಿವಾದಿಗೆ.

ಪ್ರತಿಯನ್ನು ಭೂಮಿ ಶಾಖೆ, ಹೊಸಪೇಟೆ ರವರಿಗೆ ಮುಂದಿನ ಸೂಕ್ತ ಕ್ರಮಕ್ಕಾಗಿ.